ಸಾಹಿತಿ ಮತ್ತು ಸಂಯೋಜಕ ಒಟ್ಟಿಗೇ ಕೂತು ಏನಾದರೂ ತಯಾರಿಸಿದಾಗ ಅದು ತುಂಬ ಚೆನ್ನಾಗಿರುತ್ತದೆ ಎನ್ನುವುದು ನನ್ನ ನಂಬಿಕೆ. ಸಾಮಾನ್ಯವಾಗಿ ನಾನು ಸಾಹಿತಿಗಳ ಜೊತೆಗೇ ಕುಳಿತುಕೊಳ್ಳುತ್ತೇನೆ. ಒಟ್ಟಿಗೇ ಕೂತಿರುವಾಗ ಮೊದಲು ಒಂದು ಡ್ರಮ್‌ಬೀಟ್ ಕೊಡ್ತೀನಿ. ಈ ಡ್ರಮ್‌ಬೀಟ್‌ನಲ್ಲಿ ಈ ರಿದಂನಲ್ಲಿ ಒಂದು ಸಾಲು ಬರೆಯಿರಿ ಎಂದು ಹೇಳುತ್ತೇನೆ. ಆ ಸಾಹಿತ್ಯದ ಮೇಲೆ ಹೊಸದೇನೋ ಟ್ಯೂನ್ ಬರುತ್ತದೆ. ಅಥವಾ ಅದು ಬೇಡ ಅಂದರೆ ಬೇರೇನೋ ಪ್ರಯತ್ನ ಮಾಡುತ್ತೇವೆ. ಇಂಥ ಸಂವಾದದಲ್ಲಿ ಹುಟ್ಟಿಕೊಂಡ ಹಾಡು ನಮಗೇ ಅಚ್ಚರಿ ಹುಟ್ಟಿಸಬೇಕು. ನಾವೇ ಊಹಿಸಿರದ ರೀತಿಯಲ್ಲಿ ಒಂದು ಹಾಡು ಹುಟ್ಟಿಕೊಳ್ಳಬೇಕು. ಇಲ್ಲದಿದ್ದರೆ ಅದು ಏಕತಾನತೆಗೆ ಜಾರಿಬಿಡುತ್ತದೆ.

ಸ್ವರ ಸಂಯೋಜನೆ ಎನ್ನುವುದನ್ನು ನಾನು ನನ್ನ ವೃತ್ತಿ ಎಂದೇ ಪರಿಗಣಿಸಿದ್ದೇನೆ. ಒಬ್ಬ ಸಾಫ್ಟ್‌ವೇರ್ ಎಂಜಿನಿಯರ್ ಹೇಗೆ ಕೆಲಸ ಮಾಡುತ್ತಾನೋ ಹಾಗೆಯೇ ನಾನೂ ಪ್ರತಿದಿನ ಕೆಲಸ ಮಾಡುತ್ತೇನೆ. ಸಾಮಾನ್ಯವಾಗಿ ನಾನು ಬೆಳಗ್ಗೆ ಏಳು ಗಂಟೆಗೆ ಕೆಲಸ ಶುರುಮಾಡಿದರೆ ಸಂಜೆ ಏಳು ಗಂಟೆಯವರೆಗೂ ಕೆಲಸ ಮಾಡುತ್ತಾ ಇರುತ್ತೇನೆ. ಈ ಶಿಸ್ತು ಇರಿಸಿಕೊಳ್ಳುವುದು ತುಂಬ ಮುಖ್ಯ ಎಂಬುದು ನನ್ನ ನಂಬಿಕೆ.

ದಿನದಲ್ಲಿ ನಾನು ಕೆಲಸ ಮಾಡುವ ಹನ್ನೆರಡು ಗಂಟೆಗಳೂ ಪ್ರೊಡಕ್ಟೀವ್ ಆಗಿರಲಿಕ್ಕಿಲ್ಲ. ಅದರಲ್ಲಿ ಎರಡು ಮೂರು ಗಂಟೆ ಪ್ರೊಡಕ್ಟೀವ್ ಆಗಿರುತ್ತವಷ್ಟೆ. ಆದರೆ ಆ ಪ್ರಯತ್ನ ಮತ್ತು ತನ್ಮಯತೆ ತುಂಬ ಮುಖ್ಯ. ಈಗೀಗ ಒಂದು ಸಿನಿಮಾದಿಂದ ಇನ್ನೊಂದು ಸಿನಿಮಾ ಕೆಲಸ ಆರಂಭದ ನಡುವೆ ಬ್ರೇಕ್ ಸಿಗುವುದೇ ಅಪರೂಪವಾಗಿದೆ. ಒಂದರ ಹಿಂದೆ ಇನ್ನೊಂದು ಸಿನಿಮಾ ಕೆಲಸ ಶುರುವಾಗಿಬಿಡುತ್ತದೆ. ಆದರೆ ಬ್ರೇಕ್ ಸಿಕ್ಕಾಗಲೆಲ್ಲ ಹಾಡುಗಳನ್ನು ಕೇಳುತ್ತಿರುತ್ತೇನೆ. ದಿನಕ್ಕೆ ಕನಿಷ್ಠ ಅರ್ಧ–ಮುಕ್ಕಾಲು ಗಂಟೆ ನನ್ನ ಕಲಿಕೆಗೆ ಇಟ್ಟುಕೊಂಡಿರುತ್ತೇನೆ. ಹೊಸ ಹೊಸ ಬಗೆಯ ಸಂಗೀತಗಳನ್ನು ಕೇಳುತ್ತೇನೆ. ಪ್ರತಿದಿನ ಹೊಸದೇನಾದರೂ ಕಲಿಯಬೇಕು ಎಂಬ ಗುರಿ ಇಟ್ಟುಕೊಂಡಿರುತ್ತೇನೆ. ಇದರಿಂದ ನಾನು ಹೊಸ ಪ್ರಾಜೆಕ್ಟ್ ಕೆಲಸ ಶುರುವಾಗುವ ಹೊತ್ತಿಗೆ ಸಾಕಷ್ಟು ಹೊಸ ಆಲೋಚನೆಗಳನ್ನು ಪಡೆದುಕೊಂಡಿರುತ್ತೇನೆ.

ಹೀಗಿದ್ದೂ ತುಂಬ ಸಲ ಒಂದು ನಿರ್ವಾತ ಸೃಷ್ಟಿಯಾಗಿಬಿಡುತ್ತದೆ. ಒಂದು ಹಾಡು ಮಾಡಿ ಮುಗಿಸುವಷ್ಟರಲ್ಲಿಯೇ ಮನಸ್ಸು ಖಾಲಿ ಖಾಲಿ ಅನಿಸಲು ಶುರುವಾಗಿಬಿಡುತ್ತದೆ. ಯಾಕೆಂದರೆ ಅದಕ್ಕೆ ಸಾಕಷ್ಟು ಶ್ರಮ ಮತ್ತು ಚೈತನ್ಯವನ್ನು ವಿನಿಯೋಗಿಸಿರುತ್ತೇವೆ. ಆದರೆ ಯಾವಾಗಲೂ ಕಲಿಯುತ್ತಿದ್ದರೆ ಏನೋ ಹೊಸದು ಹೊಳೆಯುತ್ತದೆ. ಬೇರೆಯವರು ಮಾಡಿದ ಮ್ಯೂಸಿಕ್ ಕೇಳುವುದರ ಮೂಲಕವೇ ನಾನು ಆ ನಿರ್ವಾತವನ್ನು ತುಂಬಿಕೊಳ್ಳುತ್ತೇನೆ. ಯಾಕೆಂದರೆ ಬೇರೆಯವರು ಯಾವ ಬಗೆಯ ಸಂಗೀತ ಸಂಯೋಜನೆ ಪ್ರಯೋಗ ಮಾಡುತ್ತಿದ್ದಾರೆ ಎನ್ನುವುದೂ ತುಂಬ ಪ್ರಭಾವ ಬೀರುತ್ತದೆ. ಅಲ್ಲಿ ಹೊಸದೇನೋ ಕಲಿಯುವುದಕ್ಕಿರುತ್ತದೆ. ಆ ಕಲಿಕೆಯ ಮೂಲಕವೇ ನಾನು ನಿರ್ವಾತವನ್ನು ತುಂಬಿಕೊಳ್ಳುತ್ತೇನೆ.

ದಿನದ 24 ಗಂಟೆಗಳಲ್ಲಿ ನಿದ್ದೆ ಬಿಟ್ಟು ಮಿಕ್ಕ ಎಲ್ಲ ಸಮಯದಲ್ಲಿಯೂ ನಾನು ಸಂಗೀತದ ಕುರಿತೇ ಯೋಚಿಸುವುದು. ಊಟದ ಸಮಯದಲ್ಲಿಯೂ ಅದನ್ನೇ ಧ್ಯಾನಿಸುತ್ತಿರುತ್ತೇನೆ. ಅದೊಂದು ಬಗೆಯಲ್ಲಿ ನನಗೆ ಉಸಿರಾಟಕ್ಕೆ ಸಿಕ್ಕಿರುವ ಗಾಳಿಯ ಹಾಗೆ. ನಾನು ಏನೇ ಹಾಡು ಮಾಡಿದರೂ ಅದರಲ್ಲಿ ನನ್ನ ವ್ಯಕ್ತಿತ್ವ ವ್ಯಕ್ತವಾಗಿರುತ್ತದೆ ಎನ್ನುವುದು ನನ್ನ ಅನುಭವ. ನಾನು ನನ್ನ ಬದುಕಿನಲ್ಲಿ ಗಳಿಸಿದ ಅನುಭವ ನಾನು ಕಟ್ಟುವ ಹಾಡಿನಲ್ಲಿ ಪ್ರತಿಫಲಿತವಾಗುತ್ತಿರುತ್ತದೆ. ಹಾಗಾಗಿ ಸಂಗೀತ ಸಂಯೋಜನೆ ಎನ್ನುವುದು ನನ್ನ ವ್ಯಕ್ತಿತ್ವವನ್ನು ನನಗೇ ಕಾಣಿಸುವ ಕನ್ನಡಿ.